ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಕವಿಪ್ರನಿನಿ/ಬಿ5ಎ/18314/2015-16** **ದಿನಾಂಕ:** 22 MAY 2020

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಬೆಂಗಳೂರು.

ಮಾನ್ಯರೇ,

**ವಿಷಯ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಿ ಮತ್ತು ಡಿ ಗುಂಪಿನ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಗಳನ್ನು ಜಾರಿಗೊಳಸುವ ಹಾಗೂ ಪದೋನ್ನತಿಗಳನ್ನು ನೀಡುವ ಬಗ್ಗೆ.

**ಉಲ್ಲೇಖ:**
1. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್‌ಎಕ್ಸ್ 2012 ದಿನಾಂಕ: 06.11.2013.
2. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್‌ಎಕ್ಸ್ 2012 ದಿನಾಂಕ; 20.01.2014.
3 ಕರ್ನಾಟಕ ಸರ್ಕಾರದ ಅಧಿಸೂಚನೆ-I ಮತ್ತು ಅಧಿಸೂಚನೆ-II ರ ಸಂಖ್ಯೆ: ಡಿ.ಪಿ.ಎ.ಆರ್ 43 ಹೆಚ್.ಕೆ.ಸಿ 2013 ದಿನಾಂಕ:29.01.2014
4. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/37280/2013-14 ದಿನಾಂಕ: 22.02.2014.
5. ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 33 ಹೈಕಉ 2014 ದಿನಾಂಕ: 10.04.2014.
6. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/18314/2015-16 ದಿನಾಂಕ; 14.10.2015.
7. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/18314/2015-16 ದಿನಾಂಕ; 19.11.2015.
8. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ5ಎ/18314/2015-16 ದಿನಾಂಕ; 27.01.2016.
9. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/37280/2013-14 ದಿನಾಂಕ: 27.01.2016 ಮತ್ತು 23.05.2017
10. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/18314/2015-16 ದಿನಾಂಕ; 11.09.2019.
11. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಎ/18314/2015-16 ದಿನಾಂಕ; 12.09.2019.
12. ನಿಗಮದ ಪತ್ರ ಸಮ ಸಂಖ್ಯೆ ದಿನಾಂಕ; 05.03.2020.

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸಂಬಂಧಿಸಿದ ಕಛೇರಿಗಳಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಉಲ್ಲೇಖ-11 ರ ಅಧಿಸೂಚನೆಯಲ್ಲಿ ಗುರುತಿಸಿದ ಹುದ್ದೆಗಳ ಸ್ಥಳೀಯ

ವೃಂದಗಳಲ್ಲಿ ವಿಲೀನಗೊಳ್ಳಲು ಇಚ್ಛಿಸಿದ ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 'ಸಿ' ಗುಂಪಿನ 44 ನೌಕರರು ಮತ್ತು 'ಡಿ' ಗುಂಪಿನ 56 ನೌಕರರು ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿಯನ್ವಯ, ಸ್ಥಳೀಯ ಪದವೃಂದದಲ್ಲಿ ವಿಲೀನಗೊಂಡು ಕಾರ್ಯನಿರ್ವಹಿಸಲು ಇಚ್ಛಿಸಿದ ಸ್ಥಳಗಳ/ಕಛೇರಿಗಳ ವಿವರಣಾ ಪಟ್ಟಿಯನ್ನು ಈಗಾಗಲೇ ನಿಗಮದ ಉಲ್ಲೇಖ-12 ರ ಪತ್ರದೊಂದಿಗೆ ನಿಮ್ಮ ಕಛೇರಿಗೆ ಕಳುಹಿಸಿದ್ದು, ನಿಮ್ಮ ಪ್ರಸರಣ ವಲಯ ಕಾರ್ಯವ್ಯಾಪ್ತಿಯ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಅವಶ್ಯವಿರುವ ಕ್ರಮಗಳನ್ನು ಜರುಗಿಸಿ ದಿನಾಂಕ: 16.03.2020 ರೊಳಗಾಗಿ ಮೀಸಲಾತಿಯ ಅನುಷ್ಠಾನ ಜಾರಿಗೊಳಿಸಲು ತಿಳಿಸಲಾಗಿತ್ತು.

ಪ್ರಸ್ತುತ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 22.05.2020 ರಂದು ನಡೆದ ಸಭೆಯಲ್ಲಿ ಸೂಚಿಸಿರುವ ಹಿನ್ನೆಲೆಯಲ್ಲಿ, ಸಿ ಮತ್ತು ಡಿ ಗುಂಪಿನ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಈ ಕೆಳಗೆ ನಿಗದಿಪಡಿಸಿದ ದಿನಾಂಕಗಳೊಳಗಾಗಿ ಸೂಚಿಸಿದ ಕ್ರಮಗಳನ್ನು ತಪ್ಪದೇ ಜರುಗಿಸಲು ಸೂಚಿಸಿದೆ:

1. ಸಿ ಮತ್ತು ಡಿ ಗುಂಪಿನ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು **ದಿನಾಂಕ: 10.06.2020 ರೊಳಗಾಗಿ** ತಪ್ಪದೇ ಪ್ರಕಟಿಸುವುದು.
2. ಸಿ ಮತ್ತು ಡಿ ಗುಂಪಿನ ಸ್ಥಳೀಯ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು **ದಿನಾಂಕ: 30.06.2020 ರೊಳಗಾಗಿ** ತಪ್ಪದೇ ಪ್ರಕಟಿಸುವುದು.
3. ಮೀಸಲಾತಿಯನ್ವಯ ಹುದ್ದೆಗಳಿಗೆ ಪದೋನ್ನತಿ ಪ್ರಕ್ರಿಯೆಯನ್ನು **ದಿನಾಂಕ: 10.07.2020 ರೊಳಗಾಗಿ** ಮುಕ್ತಾಯಗೊಳಿಸುವುದು.

ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಮೇಲಿನ ಸೂಚನೆಗಳಂತೆ ನಿಗಧಿತ ಅವಧಿಯೊಳಗಾಗಿ ಜರುಗಿಸಿರುವ ಕ್ರಮಗಳ ವಿಷಯಗಳಲ್ಲಿ ಅನುಸರಣಾ ವರದಿಯನ್ನು ಮತ್ತು ಸಂಬಂಧಿಸಿದ ವೃತ್ತಗಳಲ್ಲಿ/ವಿಭಾಗಗಳಲ್ಲಿ ಸ್ಥಳೀಯ ವೃಂದದ ನೌಕರರ ಪದೋನ್ನತಿಗಾಗಿ ಮೀಸಲಿರಿಸಿದ ಹುದ್ದೆಗಳ ಹಾಗೂ ನೀಡಿರುವ ಪದೋನ್ನತಿಗಳ ಅಂಕಿ ಅಂಶಗಳನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸಲು ಸೂಚಿಸಿದೆ.

ನಿಮ್ಮ ವಿಶ್ವಾಸಿ,

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

**ಪ್ರತಿಗಳು ಮಾಹಿತಿಗಾಗಿ:**

1. ವ್ಯವಸ್ಥಾಪಕ ನಿರ್ದೇಶಕರು, ಬೆವಿಸಕಂ. ಬೆಂಗಳೂರು.
2. ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಬೆಮೆಕ್ಷೇವಲಯ, ಬೆವಿಸಕಂ, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ;**

3. ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನಾ ವಲಯ, ಬೆಮೆಕ್ಷೇವಲಯ, ಬೆವಿಸಕಂ, ಬೆಂಗಳೂರು.
4. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ (ದಕ್ಷಿಣ), ಬೆವಿಸಕಂ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ)ಗಳು, ಪ್ರಸರಣ (ಕಾ ಮತ್ತು ನಿ ) ವೃತ್ತ, ಕವಿಪ್ರನಿನಿ, ಬೆಂಗಳೂರು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಕಾ ಮತ್ತು ಪಾ ವಿಭಾಗಗಳು, ಬೆವಿಸಕಂ, ಬೆಂಗಳೂರು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗಳು, ಟಿಎಲ್ & ಎಸ್ಎಸ್ ವಿಭಾಗಗಳು, ಕವಿಪ್ರನಿನಿ, ಬೆಂಗಳೂರು.